ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 25.07.2023.

**ಪಾಟೀ ಸವಾಲುಃ ಎದುರುದಾರ ಪರ ವಕೀಲರಿಂದಃ**

ಪುರಸಭೆ ಆಳಂದ ಪರವಾಗಿ ಯಾಗಲೂ ವಕೀಲರು ನ್ಯಾಯಾಲಯದಲ್ಲಿ ಪ್ರತಿನಿಧಿಸುತ್ತಾರೆ ಎಂದರೆ ಸರಿ. ಕೇಸ್ ಇದ್ದ ಸಮಯದಲ್ಲಿ ವಕೀಲರ ಮುಖಾಂತರ ಅರ್ಜಿ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸುತ್ತೇವೆ ಎಂದರೆ ಸರಿ. ಕೇಸಿನ ಸಲುವಾಗಿ ವಕೀಲರಿಗೆ ಯಾವಾಗಲೂ ಮಾಹಿತಿ ಕೊಡುತ್ತೇವೆ ಎಂದರೆ ಸರಿ. ಯಾವುದಾದರೂ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಲಭ್ಯವಿರುತ್ತವೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ವಾದಿ ಪುರಸಭೆ ವಿರುದ್ಧ ಒಎಸ್ ನಂ.42/2001 ಅಂತ ದಾವಾ ಆಸ್ತಿ ನಂ.2-5-106 ಮೇಲೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಕೇಸಿನಲ್ಲಿ ಪುರಸಭೆ ಪರವಾಗಿ ಬಿಎಡಿ ವಕೀಲರು ಇದ್ದರು ಎಂದರೆ ಸರಿ.

ಸದರಿ ಕೇಸಿನಲ್ಲಿ ಪುರಸಭೆ ಪರವಾಗಿ ಪ್ರತಿವಾದ ಪತ್ರ ಸಲ್ಲಿಸಿ, ಸಾಕ್ಷಿ ಹೇಳಲಾಗಿರುತ್ತದೆ ಎಂದರೆ ಸರಿ. ಸದರಿ ಕೇಸು ದಿಃ 03.01.2006 ಕ್ಕೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ 2006 ರಲ್ಲಿ ಆದ ಡಿಕ್ರಿಯ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಲ್ಲಾ ಎಂದರೆ ಸರಿಯಲ್ಲ. ಸದರಿ ಅಪೀಲಿನ ನಂಬರ ನನಗೆ ಗೊತ್ತಿಲ್ಲಾ. ಸದರಿ ಅಪೀಲು ಪುರಸಭೆ ಪರವಾಗಿ ತೀರ್ಪು ಆಗಿರುತ್ತದೆ. ಸದರಿ ಅಪೀಲು ದಿಃ 24.04.2017 ರಂದು ತೀರ್ಪು ಆಗಿರುತ್ತದೆ. ಸದರಿ ತೀರ್ಪಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮೇಲೆ ಹೇಳಿದ 2006 ರಲ್ಲಿ ಆದ ಡಿಕ್ರಿ ಮೇಲೆ ಯಾವುದೇ ಅಪೀಲು ಹಾಕಿಲ್ಲಾ ಎಂದರೆ ಸರಿಯಲ್ಲ.

ನಿಪಿ-2 ವಾದಿ ವೀರಬಸವಂತರಾವ್ ಹೆಸರಿನಲ್ಲಿ ಇರುತ್ತದೆ. ಸದರಿ ನಿಪಿ-2 ರಲ್ಲಿ

ವಿಸ್ತೀರ್ಣ 3,537 ಚದುರ ಅಡಿ ಇರುತ್ತದೆ. ಸದರಿ ವಿಸ್ತೀರ್ಣವನ್ನು ಮೂಲ ರಜಿಸ್ಟರ್ ನೋಡಿ ನಮೂದಿಸಿರುತ್ತೇವೆ ಎಂದರೆ ಸರಿ. ಮೊದಲು ದಾವೆಯಲ್ಲಿ ಸ್ಕಾಯರ್ ಮೀ. ಆಗುವ ಬದಲು ಸ್ಕಯರ್ ಫೀಟ್ ಆಗಿತ್ತು ಎಂದರೆ ಸರಿ. ಸದರಿ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲು ನ್ಯಾಯಾಲಯಕ್ಕೆ ವಾದಿ ಅರ್ಜಿ ಕೊಟ್ಟಿರುತ್ತಾನೆ ಎಂದರೆ ಸರಿ. ಸದರಿ ಅರ್ಜಿಗೆ ಪುರಸಭೆ ಪರವಾಗಿ ಎಂವಿಇ ವಕೀಲರ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ದಾಖಲೆಗಳ ಪ್ರಕಾರ ಸ್ಕಯರ್ ಮೀಟರ್ ಸರಿಯಾಗಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ನಮ್ಮ ದಾಖಲೆಗಳಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣ ಸ್ಕಯರ್ ಮೀಟರ್ ಅಂತ ಇದೆ ಎಂದರೆ ಸರಿಯಲ್ಲ.

ಸದರಿ ತಿದ್ದುಪಡಿ ಡಿಕ್ರಿ 2017 ರಲ್ಲಿ ಆಗಿದೆ ಎಂದರೆ ಸರಿ. ಡಿಕ್ರಿ ತಿದ್ದುಪಡಿ ಪ್ರತಿಯನ್ನು ನ್ಯಾಯಾಲಯದಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಡಿಕ್ರಿ ಪ್ರತಿ ಪಡೆದುಕೊಂಡ ನಂತರ ತಕ್ಷಣ ಅಪೀಲು ಸಲ್ಲಿಸಿಲ್ಲಾ ಎಂದರೆ ಸಾಕ್ಷಿ ನಮ್ಮ ಉಚ್ಛ ನ್ಯಾಯಾಲಯದ ವಕೀಲರು ಸದರಿ ಪ್ರತಿಯನ್ನು ಪಡೆದುಕೊಂಡು ತಕ್ಷಣ ನಮಗೆ ಹೇಳಲಿಲ್ಲಾ ಎಂದು ನುಡಿಯುತ್ತಾರೆ. ಡಿಕ್ರಿ ಪ್ರತಿ ಪಡೆದುಕೊಂಡ ನಂತರ ಶ್ರೀ ಎಂವಿಇ ವಕೀಲರು ನಮಗೆ ಅಪೀಲು ಮಾಡಬೇಕಾಗುತ್ತದೆ ಎಂದು ಹೇಳಿದ್ದರೂ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕೇ ಪೂರಕವಾಗಿ ದಾಖಲೆಗಳನ್ನು ಕೇಳಿದ್ದರು ಅವು ಸಿಗದೇ ಇದ್ದ ಕಾರಣ ಸ್ವಲ್ಪ ತಡವಾಗಿದೆ ಎಂದು ನುಡಿಯುತ್ತಾರೆ.

ನಮ್ಮ ಕಛೇರಿಯಲ್ಲಿ ಯಾವಾಗಲೂ ದಾವಾ ಸ್ವತ್ತಿನ ಬಗ್ಗೆ ದಾಖಲೆಗಳು

ಲಭ್ಯವಿರುತ್ತವೆ ಎಂದರೆ ಸರಿಯಲ್ಲ. ನಮ್ಮ ಮತ್ತು ಉಚ್ಚ ನ್ಯಾಯಾಲಯದ ವಕೀಲರ ಮಧ್ಯ ಯಾವುದೇ ಲಿಖಿತವಾದ ಪತ್ರ ವ್ಯವಹಾರ ಆಗಿಲ್ಲಾ. ಅವರೂ ಕೂಡಾ ನಮಗೆ ಅಪೀಲು ಮಾಡಬೇಕಾಗುತ್ತದೆ ಎಂಬ ಬಗ್ಗೆ ಲಿಖಿತ ಪತ್ರ ವ್ಯವಹಾರ ಮಾಡಿಲ್ಲಾ. ನನ್ನ ಉಚ್ಚ ನ್ಯಾಯಾಲಯದ ವಕೀಲರ ಹೆಸರು ನನಗೆ ನೆನಪು ಇಲ್ಲಾ. ನಾನು ಯಾವುದೇ ಉಚ್ಚ ನ್ಯಾಯಾಲಯದ ವಕೀಲರನ್ನು ಬೇಟಿಯಾಗಿಲ್ಲಾ ಹಾಗೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಕೇಸಿನ ಬಗ್ಗೆ ನಮಗೆ ಯಾವುದೇ ಆಸಕ್ತಿ ಇರದೇ ಇದ್ದರೂ ಕೂಡಾ ರಾಜಕೀಯ ಒತ್ತಡದಿಂದ ಈ ಅಪೀಲು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಅಪೀಲು ತಡವಾಗಿ ಸಲ್ಲಿಸಲು ಯಾವುದೇ ಸಕಾರಣ ಇಲ್ಲಾ ಎಂದರೆ ಸರಿಯಲ್ಲ. ನಮಗೆ ಡಿಕ್ರಿಯಾದ ಬಗ್ಗೆ ಮೊದಲೇ ಮಾಹಿತಿ ಇದ್ದರೂ ಕೂಡಾ ತಡವಾಗಿ ಅಪೀಲು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**